# ಜಿಯೊ ಬ್ರೈನ್!



ಏನಿದು 'ಜಿಯೊ ಬ್ರೈನ್', ಜಿಯೊಗೂ ಬ್ರೈನ್ ಇದೆಯೇ ಎಂದು ತಲೆ ಕೆರೆದುಕೊಳ್ಳಬೇಡಿ. ಇದು ರಿಲಯನ್ಸ್ ಕಂಪನಿ ಹೊರತರುತ್ತಿರುವ ಕೃತಕ ಬುದ್ಧಿಮತ್ತೆ ಆಧರಿತ ಸಮಗ್ರ ಪ್ಲಾಟ್‌ಫಾರ್ಮ್.

■ **ಶಶಿಕುಮಾರ್ ಸಿ.**

'ಜಿಯೊ ಬ್ರೈನ್' ಎಂಬ ಹೊಸ ಪ್ಲಾಟ್‌ಫಾರ್ಮ್ ಹುಟ್ಟುಹಾಕಿ ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸೃಷ್ಟಿಸಲು ರಿಲಯನ್ಸ್ ಸಜ್ಜಾಗುತ್ತಿದೆ.

ಈಚೆಗೆ ನಡೆದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ 47ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತನ್ನ ಷೇರುದಾರರೊಂದಿಗೆ ಕಂಪನಿಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮುಕೇಶ್ ಅಂಬಾನಿ ಈ ಮಾಹಿತಿ ಹಂಚಿಕೊಂಡಿದ್ದಾರೆ.

## ಏನಿದು ಜಿಯೊ ಬ್ರೈನ್?

ಜಿಯೊ ಬ್ರೈನ್ ಕನಸಿನ ಕೂಸು. ಇದು ತನ್ನ ಭವಿಷ್ಯದ ದಿಕ್ಕನ್ನು ಬದಲಿಸುವ ಮಹತ್ತರ ಹೆಜ್ಜೆಯೆಂದು ಹೇಳಿಕೊಂಡಿರುವ ಕಂಪನಿಗೆ, ಇದು ಸಂಪೂರ್ಣ ಎಐ ಆಧರಿತವಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆ. ಕಂಪನಿಗಾಗಿ ಎಐ ಆಧರಿತ ಉಪಕರಣಗಳು ಮತ್ತು ಪ್ಲಾಟ್‌ಫಾರ್ಮ್‌ಗಳ ಸಮಗ್ರ ಸೂಟ್ ಅನ್ನು ಅಭಿವೃದ್ಧಿಪಡಿಸುತ್ತಿದ್ದು, ಇದಕ್ಕೆ ಜಿಯೊ ಬ್ರೈನ್ ಎಂದು ಹೆಸರಿಸಿದೆ.

ಜಿಯೊ ಬ್ರೈನ್ ಪ್ಲಾಟ್‌ಫಾರ್ಮ್‌ನಡಿ ವಿಶ್ವ ದರ್ಜೆಯ ಮೂಲಸೌಕರ್ಯದೊಂದಿಗೆ ಕನೆಕ್ಟೆಡ್ ಇಂಟೆಲಿಜೆನ್ಸ್ ಹೊರತರಲಾಗುತ್ತದೆ. ಹೀಗಾಗಿ, 'ಎಐ ಎವರಿವೇರ್ ಫಾರ್ ಎವರಿವನ್' ಧ್ಯೇಯದೊಂದಿಗೆ ಇದನ್ನು ಪ್ರಾರಂಭಿಸಲಾಗುತ್ತದೆ. ರಿಲಯನ್ಸ್ ಜಿಯೊ ಬ್ರೈನ್ ವೇದಿಕೆಯನ್ನು ಗಟ್ಟಿಗೊಳಿಸುವ ಮೂಲಕ ನಾವು ಶಕ್ತಿಶಾಲಿ ಎಐ ಸೇವೆಗಳ ಪ್ಲಾಟ್‌ಫಾರ್ಮ್ ರೂಪಿಸಲಿದ್ದೇವೆ ಎಂದಿದ್ದಾರೆ ಮುಕೇಶ್.

## ಜಾಮ್ ನಗರದಲ್ಲಿ ಎಐ ಕೇಂದ್ರ

ಅನಂತ್ ಅಂಬಾನಿ–ರಾಧಿಕಾ ಮರ್ಚೆಂಟ್ ವಿವಾಹಪೂರ್ವ ಕಾರ್ಯಕ್ರಮದ ವಿಚಾರವಾಗಿ ಸುದ್ದಿಗೀಡಾಗಿದ್ದ ಜಾಮ್‌ನಗರದಲ್ಲಿ ಗಿಗಾ ವ್ಯಾಟ್ ಪ್ರಮಾಣದ ಎಐ ಸಿದ್ಧಪಡಿಸುವ ಡೇಟಾ ಕೇಂದ್ರ ಸ್ಥಾಪಿಸುವ ಬಗ್ಗೆ ಯೋಜನೆ ರೂಪಿಸಿರುವುದಾಗಿ ಹೇಳಿರುವ ಅವರು, ಇದು ಸಂಪೂರ್ಣವಾಗಿ ರಿಲಯನ್ಸ್‌ನ ಹಸಿರು ಶಕ್ತಿಯಿಂದ ಚಾಲಿತವಾಗಲಿದೆ ಎಂದಿದ್ದಾರೆ.

ವಿಶ್ವದಲ್ಲೇ ಅತ್ಯಂತ ಕೈಗೆಟುಕುವ ಎಐ ಇಂಟರ್‌ಫೇಸಿಂಗ್ ಅನ್ನು ಭಾರತದಲ್ಲಿಯೇ ಸೃಷ್ಟಿಸುವ ತಮ್ಮ ಕನಸಿನ ಬಗ್ಗೆ ಮಾಹಿತಿ ಹಂಚಿಕೊಂಡ ಅವರಿಗೆ, ಜಿಯೊ ಬ್ರೈನ್, ಭಾರತದಲ್ಲಿ ಎಐ ಆಧರಿತವಾಗಿ ಕಾರ್ಯನಿರ್ವಹಿಸುವ ಆ್ಯಪ್‌ಗಳನ್ನು ಇನ್ನಷ್ಟು ಕೈಗೆಟುಕುವ ರೀತಿ ಹಾಗೂ ಎಲ್ಲರಿಗೂ ಸಂಪರ್ಕ ಸಿಗುವಂತೆ ರೂಪಿಸುವ ಯೋಜನೆಯಿದೆ.

## ಯಾವುದರತ್ತ ಎಐ ಚಿತ್ತ?

ಜಿಯೊ ಬ್ರೈನ್ ಭಾಗವಾಗಿ ಕಾರ್ಯನಿರ್ವಹಿಸಲಿರುವ ಜಿಯೊ ಎಐನಲ್ಲಿ ಹಲವಾರು ಹೊಸ ಸೇವೆಗಳನ್ನು ಕಂಪನಿಯು ಇದೇ ವೇಳೆ ಪರಿಚಯಿಸಿದೆ. ಜಿಯೊ ಟಿವಿಒಎಸ್, ಹಲೊ ಜಿಯೊ, ಜಿಯೊ ಐಒಟಿ ಸಲ್ಯೂಷನ್, ಜಿಯೊ ಹೋಮ್ ಆ್ಯಪ್‌ಗಳು ಮತ್ತು ಜಿಯೊ ಫೋನ್ ಫೋನ್ ಕಾಲ್ ಎಐ ಅನ್ನು ಒಳಗೊಳ್ಳಲಿದೆ.

ಹತ್ತಾರು ಭಾಷೆಗಳ ಹೂರಣವಾಗಿರುವ ಭಾರತದಲ್ಲಿ ಆಯಾ ಭಾಷೆಗಳಲ್ಲಿ ತನ್ನ ಸೇವೆಯನ್ನು ಒದಗಿಸುವುದರ ಮೂಲಕ ಗ್ರಾಹಕರನ್ನು ತನ್ನತ್ತ ಸೆಳೆಯುವ ಭಾಗವಾಗಿ ಈ ಜಿಯೊ ಎಐ ಕಾರ್ಯನಿರ್ವಹಿಸಲಿದೆ. ■

### 100 ಜಿಬಿ ಎಐ ಕ್ಲೌಡ್

ಭಾರತೀಯ ಕ್ಲೌಡ್ ಸ್ಟೋರೇಜ್ ಆ್ಯಪ್ ಕೊರತೆ ನೀಗಿಸುವ ನಿಟ್ಟಿನಲ್ಲಿ ಜಿಯೊ ಎಐ ಕ್ಲೌಡ್ ಪರಿಚಯಿಸಿರುವ ರಿಲಯನ್ಸ್, ಗ್ರಾಹಕರನ್ನು ತನ್ನತ್ತ ಸೆಳೆಯುವ ಸಲುವಾಗಿ 100 ಜಿಬಿ ಸ್ಟೋರೇಜ್‌ನ ಉಚಿತ ವೆಲ್ಕಮ್ ಆಫರ್ ಅನ್ನು ಘೋಷಿಸಿದೆ. ಎಲ್ಲ ಡಿಜಿಟಲ್ ಕಂಟೆಂಟ್ ಮತ್ತು ಡೇಟಾವನ್ನು ಸುರಕ್ಷಿತವಾಗಿ ಸಂಗ್ರಹಿಸಲು ಮತ್ತು ಸಂಪರ್ಕಿಸಲು 100 ಜಿಬಿ ತನಕ ಉಚಿತ ಕ್ಲೌಡ್ ಸಂಗ್ರಹಣೆಯನ್ನು ಜಿಯೊ ಎಐ–ಕ್ಲೌಡ್ ಒದಗಿಸಲಿದೆ.

ಗ್ರಾಹಕರಿಗೆ ಉಚಿತವಾಗಿ ಸಿಗುವ 100 ಜಿಬಿವರೆಗಿನ ಕ್ಲೌಡ್ ಸಂಗ್ರಹದಲ್ಲಿ ಫೋಟೊಗಳು, ವಿಡಿಯೊಗಳು, ಡಾಕ್ಯುಮೆಂಟ್‌ಗಳು ಹಾಗೂ ಡಿಜಿಟಲ್‌ಗೆ ಸಂಬಂಧಿಸಿದ ಫೈಲ್‌ಗಳನ್ನು ಸಂಗ್ರಹಿಸಲು ಅವಕಾಶವಿದೆ. ಸದ್ಯ ಇಂತಹದ್ದೇ ಸೇವೆ ಒದಗಿಸುತ್ತಿರುವ ಗೂಗಲ್ ಸೇರಿದಂತೆ ಇನ್ನಿತರ ಕಂಪನಿಗಳು ಪ್ರಾರಂಭದಲ್ಲಿ ಇಂತಿಷ್ಟು ಜಿಬಿವರೆಗೆ ಕ್ಲೌಡ್ ಸ್ಟೋರೇಜ್‌ಗೆ ಅವಕಾಶ ನೀಡಿ ನಂತರ ಶುಲ್ಕ ವಿಧಿಸುತ್ತವೆ. ಇದೇ ಮಾದರಿಯನ್ನು ಜಿಯೊ ಕೂಡ ಭವಿಷ್ಯದಲ್ಲಿ ಅನುಸರಿಸಬಹುದು.